ಬೂಕನಕೆರೆ ವಿಜೇಂದ್ರ, ಮೈಸೂರು

ಸ್ಕೂಲ್ ಮಕ್ಕಳೇಕೆ ಟೀಚರನ್ನು 'ಮಿಸ್' ಎಂದು ಕರೆಯುವುದು?



ಏನೆಂದು ಕರೆಯಬಹುದು ಎಂದು ನಿರ್ಧರಿಸುವ ವಯಸ್ಸಲ್ಲವಲ್ಲ!

ಎಂ.ಸಿ. ಧನ್ಯತಾ, ಬೆಂಗಳೂರು

ಜ್ಞಾನಕ್ಕೂ, ಪರಿಜ್ಞಾನಕ್ಕೂ ಏನು ವ್ಯತ್ಯಾಸ?

ಜ್ಞಾನ ವಿದ್ಯುತ್; ಪರಿಜ್ಞಾನ ಸ್ವಿಚ್ಚು.

ರಾಂಕೊ, ತೀರ್ಥಹಳ್ಳಿ

ಆಡು ಮುಟ್ಟದ ಸೊಪ್ಪಿಲ್ಲ. ರಾಜಕಾರಣಿಗಳು ಮುಟ್ಟದ?

ಕೂಪವಿಲ್ಲ, ಪಾಪವಿಲ್ಲ, ಲೋಪವಿಲ್ಲ.

ಪಿ.ಜಿ. ರಾಘವೇಂದ್ರ, ಮೈಸೂರು

ಕದನ ವಿರಾಮವೆಂದರೆ ಬ್ರೇಕ್‌ಫಾಸ್ಟೇ?

ಅದು ಬ್ರೇಕ್'ಫಾಸ್ಟ್' ಅಲ್ಲ; ಬ್ರೇಕ್ ಆಗೋದನ್ನ ಸ್ಲೋ ಮಾಡುವ 'ಸದನ ವಿರಾಮ'.

ವಿ. ಹೇಮಂತಕುಮಾರ್, ಬೆಂಗಳೂರು

ಗಂಡಹೆಂಡಿರ ಜಗಳ ನಾಲ್ಕು ಗೋಡೆಗಳ ಮಧ್ಯೆ ಇರಬೇಕು ಅಲ್ಲವೆ?



ಇರತ್ತಲ್ಲ! ಕೋರ್ಟ್ ಹಾಲಿಗೂ ಇರುವುದು ನಾಲ್ಕು ಗೋಡೆಗಳೇ.

ರಮೇಶ ಜವಳಗಿ, ಬನಹಟ್ಟಿ

ಎಲ್ಲಾ ವಿಪಕ್ಷಿಗಳು ಆಡಳಿತಪಕ್ಷ ಖಜಾನೆ ಲೂಟಿಗೈದಿತೆಂಬರು; ಅಷ್ಟೊಂದು ಭರ್ತಿಯಾದ ಖಜಾನೆ ಸರ್ಕಾರದಲ್ಲಿದೆಯೆ?

ಪ್ರಶ್ನೆ ಅದಲ್ಲ! ಅಷ್ಟೊಂದು ದೊಡ್ಡ ಖಜಾನೆ ಲೂಟಿ ಮಾಡಿದವರ ಬಳಿ ಇರುತ್ತದಲ್ಲ!

ವಾಸಣ್ಣ, ಧಾರವಾಡ

'ರೈಲು' ಬಿಟ್ಟು ಹೋಗುವ ನಾಯಕರು ಈಗ ಯುವಜನರಿಗೆ 'ರೀಲು' ಬಿಡಲು ಹೇಳುತ್ತಿರುವರಲ್ಲಾ?

ರೀಲಿಗೆಷ್ಟು ಲೈಕು ಬಂದವೆಂದು ನೋಡುವುದರಲ್ಲಿ ಬಿಟ್ಟ ರೈಲನ್ನು ಮರೆವರೆಂದು.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ಮದ್ಯಪಾನವನ್ನು ಸರ್ಕಾರವೇ ಪ್ರೋತ್ಸಾಹಿಸುತ್ತಿದೆಯಲ್ಲ?

ಜನ ಟೈಟ್ ಆದಷ್ಟೂ ಸರ್ಕಾರದ ತಿಜೋರಿ ಟೈಟ್ ಆಗುವುದು ಕಡಿಮೆ ಆಗುವುದಲ್ಲ.

ಎಸ್. ಶಶಿಧರ್, ಬೆಂಗಳೂರು

ವಿದೇಶದಲ್ಲಿ ಶಿಸ್ತನ್ನು ಪಾಲಿಸುವ ಜನರು ಸ್ವದೇಶದಲ್ಲೇಕೆ ಪಾಲಿಸುವುದಿಲ್ಲ?

ಅಲ್ಲಿ ವೀಸಾ ರದ್ದಾಗುತ್ತಲ್ಲ! ಭಯವೇ ಶಿಸ್ತಿನ ಮೂಲವಯ್ಯ!

ಸೀಮಂತಿನಿ ದೇಸಾಯಿ, ಬೆಂಗಳೂರು

ನನಗೆ ಕರ್ನಾಟಕದ ಹೊಲಗಳೆಲ್ಲವನ್ನು ಬೇಲಿಯೇ ಮೆದ್ದಂತೆ ಕಾಣುತ್ತದೆ. ನಿಮಗೆ?

ಬೇಲ್ ಮೇಲೆ ಹೊರಬಂದವರೂ ಮೆದ್ದಂತೆ ಕಾಣುತ್ತದೆ.

ಕೆ.ವಿ. ಶಿವಕುಮಾರ್, ಮೈಸೂರು

ಪ್ರಶ್ನೆ ಕೇಳುವ ಮಿತ್ರರನ್ನೆಲ್ಲಾ ಒಂದೆಡೆ ಸೇರಿಸಬೇಕೆಂದಿದ್ದೇನೆ. ನಿಮ್ಮ 'ಉತ್ತರ'ದ ಸಲಹೆ?

ಅದಕ್ಕೆ ಮೊದಲು ಕಪ್ಪೆಗಳನ್ನು ತಕ್ಕಡಿಗೆ ಹಾಕುವ ತರಬೇತಿ ಪಡೆಯಿರಿ.

ಮೃತ್ಯುಂಜಯ ಎ., ಪಾಂಡವಪುರ

ಗಂಡ ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದರೂ ಹೆಂಡತಿ 'ನಿಮಗೆ ಗೊತ್ತಾಗಲ್ಲ ಸುಮ್ನಿರಿ' ಅಂತಾರಲ್ಲ?

ಸರಿಯೇ. ದೂರದೃಷ್ಟಿಗಿಂತ ದೂರುದೃಷ್ಟಿ ಹೆಚ್ಚು ಸೂಕ್ಷ್ಮ.

ಎನ್. ವೈದೇಹಿ, ಮೈಸೂರು

ಆ್ಯಂಟಿ ಬಯೊಟಿಕ್ ಮತ್ತು ಆ್ಯಂಟಿ ಏಜಿಂಗ್ ಇವೆರಡರ ವ್ಯತ್ಯಾಸವೇನು?

ಸೈಡ್ ಎಫೆಕ್ಟ್ ಇರುವ ಅದು ವೃಶ್ಚಿಕ ರಾಶಿ; ಚೆಲುವಿಗೆ ಸಂಬಂಧಿಸಿದ್ದರಿಂದ ಇದು ಕನ್ಯಾ.

ಪಿ. ಜಯವಂತ ಪೈ, ಕುಂದಾಪುರ

ಪ್ರವಾಸಿಗೂ, ಯಾತ್ರಿಗೂ ವ್ಯತ್ಯಾಸವೇನು?

ಪ್ರವಾಸಿಗೆ ಯಾವ 'ತೀರ್ಥ'ವೂ ಆದೀತು. ಯಾತ್ರಿಗೆ ದೇವಸ್ಥಾನದ್ದೇ ಆಗಬೇಕು.

## ಬಹುಮಾನಿತ ಪ್ರಶ್ನೆ

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ

ಒಂದು ದಿನ ಎಲ್ಲ ಮೊಬೈಲ್‌ಗಳು ಕಾರ್ಯ ನಿಲ್ಲಿಸಿದರೆ ಪರಿಸ್ಥಿತಿ ಹೇಗಿರುತ್ತದೆ?

ಮತ್ತೆ ಕ್ಯಾಮೆರಾ, ಟೇಪ್ ರೆಕಾರ್ಡರ್, ಟೆಲಿಗ್ರಾಂಗಳಿಗೆ ಶುಕ್ರದೆಸೆ ಒದಗುತ್ತದೆ.

ಅರವಿಂದ ಜಿ. ಜೋಷಿ, ಮೈಸೂರು

'ಸೋತು ಗೆಲ್ಲುವುದು' ಎಂದರೇನು?

ಮ್ಯಾಚ್ ಫಿಕ್ಸಿಂಗ್!

ಕುಣಿಗಲ್ ಜಯಣ್ಣ, ಕೆಂಚನಹಳ್ಳಿ

ನಾಯಿಯನ್ನು ಸಾಕುತ್ತಾರೆ. ತಾಯಿಯನ್ನು ಸಾಕಲು ಹಿಂಜರಿಯುವುದೇಕೆ?

ನಾಯಿಯು 'ಅದೇನೂಂತ ಕಟ್ಕೊಂಡ್ಯೋ', 'ಹೀಗೇನೋ ಮಕ್ಳನ್ ಸಾಕೋದು' ಎಂದೆಲ್ಲ ಗೊಣಗದು.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ವಿವಾಹದಲ್ಲಿ ವಧುವರರಿಗೆ ಅರುಂಧತಿ ನಕ್ಷತ್ರವನ್ನು ತೋರಿಸುವ ರಹಸ್ಯವೇನು?



'ನೀನು ನೋಡು ಅನ್ನು; ನಾನು ನೋಡ್ದೆ ಅಂತೀನಿ' ಎಂಬ ದಂಪತಿಗಳ ಮೊದಲ ಸುಳ್ಳೊಪ್ಪಂದವದು.

ವಿಜಯಕುಮಾರ್ ಎಚ್.ಕೆ. ರಾಯಚೂರು

ಇಂದಿನ ಕಲಾರಸಿಕರು, ಕಲಾಪೋಷಕರು ನಾಟಕಗಳಲ್ಲಿ ದ್ವಂದ್ವಾರ್ಥ ಬಯಸುವರೇಕೆ?

ಹಾಗೇನಿಲ್ಲ. ಮೃಷ್ಟಾನ್ನ ಬಡಿಸುವ ನಾಟಕಕಾರರು ವಿರಳವಾದ್ದರಿಂದ ಚಿತ್ರಾನ್ನವೇ ಗತಿ ಆಗಿದೆ.

ಚೈತ್ರ ತೊಪ್ಪಲದ, ಬ್ಯಾಡಗಿ

ಮನೆಯನ್ನಾಗಲಿ, ಮನವನ್ನಾಗಲಿ ಹೆಚ್ಚು ದಿನ ಖಾಲಿ ಬಿಟ್ಟರೆ ಹಾಳಾಗುತ್ತಂತೆ. ಹೌದೆ?

ಮನೆ ಹಾಳಾದೀತು. ಮನಸ್ಸು ಸಿಟಿ ಸೆಂಟರಿನ ಬಾಡಿಗೆಮನೆಯಂತೆ; ಎಂದೂ ಖಾಲಿ ಇರದು.

■ ರಾಮ್